1. ಆಗಿಂದಾಗ್ಗೆ ಸುತ್ತೋಲೆ ಸೂಚನೆಗಳನ್ನು ಹೊರಡಿಸಲಾಗಿದೆ.

2. ಘಟಕ ಮತ್ತು ನಿಯಂತ್ರಣಾಧಿಕಾರಿಗಳಿಗೆ ಆಗಿಂದಾಗ್ಗೆ ಆರೆ ಸರ್ಕಾರಿ ಪತ್ರಗಳ ಮೂಲಕ ಸೂಚನೆಗಳನ್ನು ನೀಡಲಾಗಿದೆ.

3. ನಿಯಂತ್ರಣಾಧಿಕಾರಿಗಳ ಸಭೆಗಳನ್ನು ಕರೆದು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ, ಅವುಗಳ ನಡವಳಿಕೆಗಳಲ್ಲಿ ಮಾರ್ಗದರ್ಶನ ನೀಡಲಾಗಿದೆ.

4) ಪುನರ್ ವಿಮರ್ಶೆಗಳನ್ನು ವಿಭಾಗ ಮಟ್ಟದಲ್ಲಿ, ವೃತ್ತ ಮಟ್ಟದಲ್ಲಿ ಮುಖ್ಯ ಲೆಕ್ಕಾಧಿಕಾರಿಯವರು ಮತ್ತು ಅವರ ಸಿಬ್ಬಂದಿಯವರು (1991–92ರಲ್ಲಿ) ಒಂದು ಬಾರಿ ನಡೆಸಿರುತ್ತಾರೆ. ನಂತರ ರಾಜ್ಯಮಟ್ಟದಲ್ಲಿ ಆಗಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ನಿ) ರವರು ಒಂದು ಸಾರಿ ವೃತ್ತವಾರು ಪುನರ್ ವಿಮರ್ಶೆಗಳನ್ನು ನಡೆಸಿರುತ್ತಾರೆ. (ಅಕ್ಟೋಬರ್ 1992ರಿಂದ ನವೆಂಬರ್ 1992 ರವರೆಗೆ). ಮತ್ತೊಂದು ಬಾರಿ ಮುಖ್ಯ ಲೆಕ್ಕಾಧಿಕಾರಿಯವರು ಮತ್ತು ಸಿಬ್ಬಂದಿಯವರು ವೃತ್ತಗಳ ಪತ್ರಾಂಕಿತ ವ್ಯವಸ್ಥಾಪಕರೊಡನೆ ಪುನರ್ ವಿಮರ್ಶೆ (ಮಾರ್ಚ್ 1993ರಲ್ಲಿ) ನಡೆಸಿರುತ್ತಾರೆ. ಇವುಗಳ ನಡವಳಿಕೆಗಳಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಇ) ಮೇಲೆ ತಿಳಿಸಿದಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಇದನ್ನೇ ಮುಂದುವರಿಸಲಾಗುವುದು.

## ರಾಜ್ಯದ ವಾಸ್ತವಿಕ ಜಾನುವಾರುಗಳ ಸ್ಥಿತಿ ಮತ್ತು ಅವುಗಳ ಆರೋಗ್ಯದ ನಿರ್ವಹಣೆಗೆ ಒದಗಿಸಿರುವ ಸೌಕರ್ಯ

**(2120):** ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಾಸ್ತವಿಕ ಜಾನುವಾರುಗಳ ಸ್ಥಿತಿ ಮತ್ತು ಅವುಗಳ ಆರೋಗ್ಯದ ನಿರ್ವಹಣೆಗೆ ಒದಗಿಸಿರುವ ಸೌಕರ್ಯಗಳಾವುವು;

ಆ) ರಾಜ್ಯದಲ್ಲಿ ಸಾಕು ಪ್ರಾಣಿಗಳ ಅಭಿವೃದ್ಧಿಗಾಗಿ ಯಾವುದಾದರೂ ಸಂಶೋಧನಾ ಮತ್ತು ತರಬೇತಿಯ ವಿಭಾಗ ಇದೆಯೇ;

ಇ) ರಾಜ್ಯ ಸರ್ಕಾರವು ಪಶು ಸಂಗೋಪನಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಆಲೋಚನೆ ಇದೆಯೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) ಎ) ಒಟ್ಟು ಜಾನುವಾರುಗಳ ಸಂಖ್ಯೆ 249.84 ಲಕ್ಷ ಕೋಳಿಗಳ ಸಂಖ್ಯೆ. 156.94 ಲಕ್ಷ.
ಬಿ) ರಾಜ್ಯದಲ್ಲಿರುವ ಪಶು ವೈದ್ಯಕೀಯ ಸಂಸ್ಥೆಗಳಿಂದ.

ಆ) ಇದೆ.

ಇ) ಇಲ್ಲ.